ಚ KAHS510006072020

Presented on : 14-07-2020
Registered on : 14-07-2020
Decided on : 10-02-2023
Duration : 2 years, 5 months, 27 days

**O.S./155/2020**

# ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೇಲೂರು.

ದಿನಾಂಕಃ **10** ನೇ ಫೆಬ್ರವರಿ ಮಾಹೆ, **2023** ನೇ ಇಸವಿ

: ಉಪಸ್ಥಿತರು :
ಶ್ರೀ ಪ್ರಸನ್ನ ಕುಮಾರ್ ಸಿ., ಬಿ.ಎ.ಎಲ್. ಎಲ್‌ಎಲ್.ಬಿ.
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಬೇಲೂರು.

ಅಸಲು ದಾವಾ ಸಂಖ್ಯೆಃ **155/2020**

ಶ್ರೀ ಕೆ.ಸಿ. ವಿರೂಪಾಕ್ಷ ಬಿನ್ ಚನ್ನೇಗೌಡ,
42 ವರ್ಷ,
ಕೋಡನಹಳ್ಳಿ ಗ್ರಾಮ, ಕಸಬಾ ಹೋಬಳಿ,
ಬೇಲೂರು ತಾಲ್ಲೂಕು. .....ವಾದಿ

(ವಾದಿಯ ಪರವಾಗಿ ಶ್ರೀ ಪಿ.ಎಂ.ತಮ್ಮಣ್ಣಗೌಡ, ವಕೀಲರು ಪ್ರತಿನಿಧಿಸಿರುತ್ತಾರೆ.)

ವಿರುದ್ಧ

1. ಶ್ರೀ ರಘು ಬಿನ್ ಸಿದ್ದೇಗೌಡ,
   35 ವರ್ಷ,

2. ಶ್ರೀ ಅಶೋಕ ಬಿನ್ ನಂಜೇಗೌಡ,
   30 ವರ್ಷ,

3. ಶ್ರೀ ವಿರೂಪಾಕ್ಷ ಉಃ ಸ್ವಾಮಿ ಬಿನ್ ನಂಜೇಗೌಡ,
   60 ವರ್ಷ,

ಎಲ್ಲರೂ ರಾಮದೇವರಹಳ್ಳಿ ಗ್ರಾಮ, ಮುಗಳವಳ್ಳಿ ಅಂಚೆ,
ಅಂಬಳೆ ಹೋಬಳಿ, ಚಿಕ್ಕಮಗಳೂರು ತಾಲ್ಲೂಕು ವಾಸಿಗಳು.

4. ರಘು ಬಿನ್ ಚಂದ್ರೇಗೌಡ,
40 ವರ್ಷ,
ಮಾಗಡಿ ಕೈಮರ, ಮುಗಳವಳ್ಳಿ ಅಂಚೆ,
ಚಿಕ್ಕಮಗಳೂರು ತಾಲ್ಲೂಕು. .... ಪ್ರತಿವಾದಿಗಳು

(ಪ್ರತಿವಾದಿಯರು ಏಕಪಕ್ಷೀಯ)

| | | |
|---|---|---|
| ದಾವಾ ದಾಖಲಿಸಿದ ದಿನಾಂಕ | - | 14-07-2020 |
| ದಾವೆಯ ಸ್ವರೂಪ | - | ಶಾಶ್ವತ ನಿರ್ಬಂಧಕಾಜ್ಞೆ |
| ಸಾಕ್ಷಿಯ ವಿಚಾರಣೆಯನ್ನು ದಾಖಲು ಮಾಡಲು ಆರಂಭವಾದ ದಿನಾಂಕ | - | **09-12-2022** |
| ತೀರ್ಪು ಪ್ರಕಟಿಸಿದ ದಿನಾಂಕಃ | - | **10-02-2023** |
| ತೆಗೆದುಕೊಂಡ ಅವಧಿ | - | 02 ವರ್ಷಗಳು, 06 ತಿಂಗಳು, 27 ದಿನಗಳು |

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಬೇಲೂರು.

## ತೀರ್ಪು

ಪ್ರಸ್ತುತ ದಾವೆಯನ್ನು ವಾದಿಯು ಸಲ್ಲಿಸಿ ದಾವಾ ಸ್ವತ್ತಾದ ಬೇಲೂರು ತಾಲ್ಲೂಕು, ಕಸಬಾ ಹೋಬಳಿ, ಶಿರಗಟ್ಟ ಗ್ರಾಮದ ಸರ್ವೆ ನಂ.15 ರ ಖುಷ್ಕಿ 4 ಎಕರೆ 37 ಗುಂಟೆ ಜಮೀನಿಗೆ ಪ್ರತಿವಾದಿಯರಾಗಲೀ ಅಥವಾ ಅವರ ಕಡೆ ಯಾರೇ ಆಗಲಿ ವಾದಿಯ ದಾವಾ ಅನುಸೂಚಿ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡದಂತೆ ಮತ್ತು ಕೃಷಿ ಚಟುವಟಿಕೆಗಳಿಗೆ ಯಾವುದೇ ರೀತಿಯ ತೊಂದರೆ, ತಕರಾರು ಅಡ್ಡಿ ಆತಂಕ ಪಡಿಸದಂತೆ ಪ್ರತಿವಾದಿಯರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡಬೇಕಾಗಿ ಈ ದಾವೆಯಲ್ಲಿ ಪ್ರಾರ್ಥಿಸಿಕೊಂಡಿರುತ್ತಾರೆ.

ಈ ದಾವೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.

2. ದಾವಾ ಸ್ವತ್ತು ವಾದಿಗೆ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತಾಗಿದ್ದು, ಸದರಿ ಸ್ವತ್ತು ವಾದಿಯ ತಾಯಿ ಕುಸುಮರವರ ತಂದೆ ಮಲ್ಲೇಗೌಡ ರವರಿಗೆ ವಾರಸುದಾರಿಕೆ ಮೂಲಕ ಬಂದಿದ್ದು, ಸದರಿಯವರ ಹಕ್ಕು ಮತ್ತು ಸ್ವಾಧೀನಾನುಭವದಲ್ಲಿರುತ್ತದೆ. ಸದರಿ ಮಲ್ಲೇಗೌಡರವರು ಪೌತಿಯಾದ ನಂತರ ಅವರ ಕುಟುಂಬದ ಇತರ ಸದಸ್ಯರ ಒಪ್ಪಿಗೆ ಮೇರೆಗೆ ಮಲ್ಲೇಗೌಡರ ಮಗಳಾದ ಕುಸುಮ ರವರ ಹಕ್ಕು ಮತ್ತು ಸ್ವಾಧೀನಾನುಭವಕ್ಕೆ ಬಂದಿದ್ದು, ಅದರಂತೇ ಸದರಿ ಕುಸುಮ ರವರಿಗೆ ಎಂ.ಆರ್. ನಂ. ಹೆಚ್.9/2016-17 ರ ರೀತ್ಯಾ ದಿನಾಂಕಃ 17-01-2017 ರಂದು ಹಕ್ಕು ದಾಖಲಾಗಿರುತ್ತದೆ. ನಂತರ ಸದರಿ ಕುಸಮ ರವರು ಸಹ ನಿಧನರಾದ ಕಾರಣ ಅವರ ಮಗನಾದ ವಾದಿಯ ಹೆಸರಿಗೆ ದಿನಾಂಕಃ 27-03-2017 ರಂದು ಎಂ.ಆರ್. ನಂ.ಹೆಚ್.17/16-17 ರಂತೆ ಹಕ್ಕು ದಾಖಲಾಗಿರುತ್ತದೆ ಮತ್ತು ವಾದಿಯ ತಾತನ ಕಾಲದಿಂದಲೂ ಸಹ ದಾವಾ ಆಸ್ತಿಯನ್ನು ವಾದಿಯ ಕುಟುಂಬಸ್ಥರು ಶಾಂತಿಯುತ ಸ್ವಾಧೀನಾನುಭವದಲ್ಲಿದ್ದು ಕಾಲಕಾಲಕ್ಕೆ ಕಂದಾಯ ವಗೈರೆಗಳನ್ನು ಪಾವತಿಸುತ್ತಿರುತ್ತಾರೆ.

3. ವಾದಿಯು ಮುಂದುವರೆದು ತಮ್ಮ ವಾದ ಪತ್ರದಲ್ಲಿ ಭಿನ್ನವಿಸಿಕೊಳ್ಳುವುದೇನೆಂದರೆ ವಿದ್ಯಾಮಾನಗಳು ಹೀಗಿರುವಾಗ ವಾದಿಯು ದಾವಾ ಸ್ವತ್ತಿನ ಸುತ್ತಲೂ ಚರಂಡಿ ನಿರ್ಮಿಸಿ ಜಮೀನು ಅಭಾದು ಮಾಡಿ ಜೋಳ, ರಾಗಿ ಮುಂತಾದ ಬೆಳೆಗಳನ್ನು ಬೆಳೆಯುತ್ತಾ ಹಕ್ಕುದಾರಿ ಮಾಲೀಕರಾಗಿ ಶಾಂತಿಯುತ ಸ್ವಾಧೀನಾನುಭವದಲ್ಲಿರುತ್ತಾರೆ. ವಾದಿಯ ದಾವಾ ಅನುಸೂಚಿ ಸ್ವತ್ತಿನ ಯಾವುದೇ ದಿಕ್ಕಿನಲ್ಲಿಯೂ ಪ್ರತಿವಾದಿಯರಿಗೆ ಸೇರಿದ ಜಮೀನು ಇಲ್ಲದಿದ್ದರೂ ಸಹಾ, ಈಗ್ಗೆ ದಾವಾ ಹೂಡುವ 15 ದಿನಗಳ ಹಿಂದೆ ವಾದಿಯು ದಾವಾ ಸ್ವತ್ತಿನಲ್ಲಿ ಜೆ.ಸಿ.ಬಿ ಸಹಾಯದಿಂದ ದಾವಾ ಸ್ವತ್ತಿನ ಸುತ್ತಲೂ ಚರಂಡಿಯನ್ನು ಅಚ್ಚುಕಟ್ಟು ಮಾಡುತ್ತಿರುವಾಗ ಪ್ರತಿವಾದಿಯರು ವಿನಾ ಕಾರಣ ಅಕ್ರಮ ಕೂಟ

ಕಟ್ಟಿಕೊಂಡು ಬಂದು ವಾದಿಯೊಂದಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ದನಗಳನ್ನು ನುಗ್ಗಿಸಲು ಪ್ರಯತ್ನಿಸಿರುತ್ತಾರೆ. ಸದರಿ ವಿಚಾರವನ್ನು ವಾದಿಯು ಕೇಳಲಾಗಿ, ಪ್ರತಿವಾದಿಯರು ಪ್ರಾಣ ಬೆದರಿಕೆ ಹಾಕಿ ದೈಹಿಕವಾಗಿ ಹಲ್ಲೆ ನಡೆಸಲು ಪ್ರಯತ್ನಿಸಿರುತ್ತಾರೆ. ಈ ಬಗ್ಗೆ ಬೇಲೂರು ಪೋಲೀಸ್ ಠಾಣೆಗೆ ದೂರು ನೀಡಿದ್ದು, ಸದರಿಯವರು ನ್ಯಾಯಾಲಯದಲ್ಲಿ ಪ್ರಕರಣವನ್ನು ಇತ್ಯರ್ಥ ಪಡಿಸಿಕೊಳ್ಳಲು ಸೂಚಿಸಿರುತ್ತಾರೆ. ಪ್ರತಿವಾದಿಯರಿಗೆ ದಾವಾ ಅನುಸೂಚಿ ಸ್ವತ್ತಿನ ವೇಲೆ ಯಾವುದೇ ರೀತಿಯ ಹಕ್ಕು, ಅಧಿಕಾರ, ಸ್ವಾಧೀನಾನುಭವ ಇಲ್ಲದಿದ್ದರೂ ಸಹ ವಾದಿಯ ಶಾಂತಿಯುತವಾದ ಸ್ವಾಧೀನಾನುಭವಕ್ಕೆ ಅಡ್ಡಿಆತಂಕವನ್ನುಂಟು ಮಾಡುತ್ತಿರುತ್ತಾರೆ. ಪ್ರತಿವಾದಿಯರು ಸ್ಥಳದಲ್ಲಿ ಜನಬಲ, ಹಣಬಲ, ರಾಜಕೀಯ ಬಲವುಳ್ಳ ವ್ಯಕ್ತಿಗಳಾಗಿದ್ದು, ಸದರಿಯವರ ಅಕೃತ್ಯವನ್ನು ತಡೆಯಲು ವಾದಿಯು ಮೇಲಿನಂತೆ ಸೂಕ್ತ ಪರಿಹಾರ ಕೋರಿ ಈ ದಾವಾ ತಂದಿರುತ್ತಾರೆ.

4. ಮೇಲ್ಕಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಯ ವಾದ ಪತ್ರದಲ್ಲಿರುವ ಅಂಶವನ್ನು ಅಲ್ಲಗಳೆಯುವ ಸಲುವಾಗಿ ಪ್ರತಿವಾದಿಯರಿಗೆ ನ್ಯಾಯಾಲಯದಿಂದ ಸಮನ್ಸನ್ನು ಜಾರಿ ಮಾಡಿದ್ದು, ಸದರಿ ಸಮನ್ಸ್ ಪ್ರತಿವಾದಿಯರಿಗೆ ತಲುಪಿದರೂ ಸಹ ನ್ಯಾಯಾಲಯಕ್ಕೆ ಹಾಜರಾಗಿ, ತಮ್ಮ ಪರವಾಗಿ ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ನ್ಯಾಯಾಲಯವು ಪ್ರತಿವಾದಿಯರ ವಿರುದ್ಧ ಏಕಪಕ್ಷೀಯ ಆದೇಶ ಮಾಡಿರುತ್ತದೆ.

5. ಈ ನ್ಯಾಯಾಲಯವು ವಾದಿಯ ವಾದ ಪತ್ರವನ್ನು ಆಧರಿಸಿ ಈ ದಾವೆಯ ಇತ್ಯರ್ಥಕ್ಕಾಗಿ ಈ ಕೆಳಕಂಡ ಅಂಶಗಳನ್ನು ರೂಪಿಸಿರುತ್ತದೆ.

<u>ಅಂಶಗಳು</u>

1. ವಾದಿಯು ದಾವಾದಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹರೇ?

2. ಯಾವ ಆದೇಶ?

6. ಈ ಮೇಲ್ಕಂಡ ಅಂಶಗಳನ್ನು ರುಜುವಾತುಪಡಿಸಲು ವಾದಿಯು ತನ್ನನ್ನೇ ಪಿಡಬ್ಲ್ಯೂ -1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ತನ್ನ ಪರವಾಗಿ 10 ದಾಖಲೆಗಳನ್ನು ಹಾಜರುಪಡಿಸಿ, ನಿಪಿ-1 ರಿಂದ ನಿಪಿ 10 ರವರೆಗೆ ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ. ಇದಕ್ಕೆ ಪ್ರತಿಯಾಗಿ ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿ ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ ಹಾಗೂ ತಮ್ಮಗಳ ಪರವಾಗಿ ಯಾರೊಬ್ಬ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ನಿಶಾನೆಗೆ ಗುರುತಿಸಿಕೊಂಡಿರುವುದಿಲ್ಲ. ಅಲ್ಲದೇ ಪಿಡಬ್ಲ್ಯೂ1 ರವರನ್ನು ಸಹ ಪಾಟೀ ಸವಾಲಿಗೆ ಒಳಪಡಿಸಿರುವುದಿಲ್ಲ.

7. ವಾದವನ್ನು ಆಲಿಸಲಾಯಿತು.

8. ನ್ಯಾಯಾಲಯವು ವಾದಿಯ ವಾದ ಪತ್ರ, ಮಂಡಿಸಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯ ಹಾಗೂ ಕಡತದಲ್ಲಿ ಲಭ್ಯವಿರುವ ಎಲ್ಲಾ ಪುರಾವೆಗಳನ್ನು ಪರಿಗಣನೆಗೆ ತೆಗೆದುಕೊಂಡು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತದೆ.

ಅಂಶಃ 1 ಃ ಸಕಾರಾತ್ಮಕವಾಗಿ

ಅಂಶಃ 2 ಃ ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದ ಪ್ರಕಾರ

ಕಾರಣಗಳು

ಒಂದನೆ ಅಂಶಃ

9. ಈ ದಾವೆಯಲ್ಲಿ ವಾದಿಯ ದಾವಾ ಅನುಸೂಚಿ ಸ್ವತ್ತಿಗೆ ಪ್ರತಿವಾದಿಯರಾಗಲೀ ಅಥವಾ ಅವರ ಕಡೆ ಯಾರೇ ಆಗಲಿ ಅತಿಕ್ರಮ ಪ್ರವೇಶ ಮಾಡದಂತೆ ಮತ್ತು ಕೃಷಿ ಚಟುವಟಿಕೆಗಳಿಗೆ ಯಾವುದೇ ರೀತಿಯ ತೊಂದರೆ, ತಕರಾರು ಅಡ್ಡಿ ಆತಂಕ ಪಡಿಸದಂತೆ

ಪ್ರತಿವಾದಿಯರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡಬೇಕಾಗಿ ಕೋರಿರುತ್ತಾರೆ.

10. ವಾದಿಯು ತಮ್ಮ ವಾದ ಪತ್ರದಲ್ಲಿನ ವಿಷಯಗಳನ್ನು ರುಜುವಾತುಪಡಿಸುವ ಸಲುವಾಗಿ ತನ್ನನ್ನೇ ಪಿಡಬ್ಲ್ಯೂ -1 ಸಾಕ್ಷಿ ಎಂದು ವಿಚಾರಣೆಗೆ ಒಳಪಡಿಸಿಕೊಂಡು ತಮ್ಮ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದ ಪತ್ರದಲ್ಲಿರುವ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ ಅಲ್ಲದೇ ವಾದಿಯ ಪರವಾಗಿ ಸುಮಾರು 10 ದಾಖಲೆಗಳನ್ನು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ. ನಿಪಿ.1 ವಾದಿಯ ಹೆಸರಿನಲ್ಲಿರುವ 2019-2020 ನೇ ಸಾಲಿನ ಶಿರಘಟ್ಟ ಗ್ರಾಮ, ಕಸಬಾ ಹೋಬಳಿ, ಬೇಲೂರು ತಾಲ್ಲೂಕಿನ ಸರ್ವೆ ನಂ. 15 ರ ವಿಸ್ತೀರ್ಣ 4 ಎಕರೆ 37 ಗುಂಟೆ ಜಮೀನಿನ ಪಹಣಿ ಪತ್ರಿಕೆ, ನಿಪಿ.2 ವಾದಿಯ ತಾತನಾದ ಮಲ್ಲೇಗೌಡ ರವರ ಹೆಸರಿನಲ್ಲಿರುವ 2016-17 ನೇ ಇಸವಿಯ ಸರ್ವೆ ನಂ.15 ರ ಪಹಣಿ ಪತ್ರಿಕೆ. ನಿಪಿ.3 ವಾದಿಯ ತಾಯಿಯಾದ ಕುಸುಮ ರವರ ಹೆಸರಿಗೆ ಎಂ.ಆರ್. ನಂ.ಹೆಚ್.9/2016-17 ರಂತೆ ಪೌತಿ ಖಾತೆಯ ಆಧಾರದ ಮೇಲೆ ಎಂದು ನಮೂದಾಗಿರುವ 2016-17 ನೇ ಸಾಲಿನ ಸರ್ವೆ ನಂ.15 ರಲ್ಲಿ ವಿಸ್ತೀರ್ಣ 4 ಎಕರೆ 37 ಗುಂಟೆ ಜಮೀನಿನ ಪಹಣಿ ಪತ್ರಿಕೆ, ನಿಪಿ.4 1996-97 ರಿಂದ 2000-2001 ರ ತನಕ ವಾದಿಯ ತಾತನಾದ ಮಲ್ಲೇಗೌಡ ರವರ ಹೆಸರಿನಲ್ಲಿ ಮುಂದುವರಿದುಕೊಂಡ ಬಂದಿರುವ ಸರ್ವೆ ನಂ.15 ರಲ್ಲಿ 4 ಎಕರೆ 37 ಗುಂಟೆ ಜಮೀನಿನ ರೆಕಾರ್ಡ್ ಆಫ್ ರೈಟ್ಸ್ ಮತ್ತು ಪಹಣಿ ಪತ್ರಿಕೆ. ನಿಪಿ.5 ಎಂ.ಆರ್.ನಂ. ಹೆಚ್.17/2016-17 ರಂತೆ ಕುಸುಮ ಕೋಂ ಚನ್ನೇಗೌಡ ರವರಿಂದ ವಾದಿಯ ಹೆಸರಿಗೆ ಸರ್ವೆ ನಂ.15 ರ 4 ಎಕರೆ 37 ಗುಂಟೆ ಜಮೀನಿನ ಹಕ್ಕು ಬದಲಾವಣೆಯಾದ ಬಗ್ಗೆ ಮ್ಯುಟೇಶನ್ ರಿಜಿಸ್ಟರ್ ನ ಪ್ರತಿ, ನಿಪಿ.6 ದಾವಾ ಆಸ್ತಿಯು ಎಂ.ಆರ್.ನಂ. ಹೆಚ್.9/2016-17 ರೀತ್ಯಾ ಮಲ್ಲೇಗೌಡರವರಿಂದ ಕುಸುಮ ಕೋಂ ಚನ್ನೇಗೌಡ ರವರ ಹೆಸರಿಗೆ ಹಕ್ಕು

ಬದಲವಾಣೆಯಾದ ಬಗ್ಗೆ ಮ್ಯುಟೇಶನ್ ರಿಜಿಸ್ಟರ್ ಪ್ರತಿ ಹಾಗೂ ಅದರ ಹದ್ದು ಬಸ್ತು ನಕ್ಷೆ. ನಿಪಿ.7 ಲೆಡ್ಜರ್ ಖಾತೆಯ ಪ್ರಮಾಣ ಪತ್ರ, ನಿಪಿ.8 ಕಂದಾಯ ಪಾವತಿ ಮಾಡಿರುವ ಬಗ್ಗೆ ರಶೀದಿ, ನಿಪಿ.9 ಇಂಡೆಕ್ಸ್ ಆಫ್ ಲ್ಯಾಂಡ್ ನ ದೃಢೀಕೃತ ನಕಲು, ನಿಪಿ.10 ರೆಕಾರ್ಡ್ ಆಫ್ ರೈಟ್ ನ ದೃಢೀಕೃತ ನಕಲಾಗಿರುತ್ತದೆ. ಪ್ರತಿವಾದಿಯರು ತಮ್ಮಗಳ ಪರವಾಗಿ ಯಾರೊಬ್ಬ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ನಿಶಾನೆಗೆ ಗುರುತಿಸಿಕೊಂಡಿರುವುದಿಲ್ಲ. ಅಲ್ಲದೇ ಪಿಡಬ್ಲ್ಯೂ1 ರವರನ್ನು ಪಾಟೀ ಸವಾಲಿಗೆ ಒಳಪಡಿಸಲು ಸಹ ವಿಫಲರಾಗಿರುತ್ತಾರೆ.

11. ವಾದಿಯು ತಮ್ಮ ವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ಹಾಗೂ ಪಿಡಬ್ಯೂ1 ಆಗಿ ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವ ಸಾಕ್ಷ್ಯವನ್ನು ಹಾಗೂ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ದಾಖಲೆಗಳನ್ನು ಹಾಗೂ ವಾದಿಯ ಪರ ವಕೀಲರು ಮಂಡಿಸಿದ ವಾದವನ್ನು ಕೂಲಂಕುಷವಾಗಿ ವಿಮರ್ಶೆ ಮಾಡಿದ ನಂತರ, ದಾವಾ ಆಸ್ತಿಯು ಮೂಲತಃ ವಾದಿಯ ಅಜ್ಜನಾದ ಮಲ್ಲೇಗೌಡ ರವರಿಗೆ ಐಸಿಆರ್ 3/62-63 ಆರ್ ಆರ್ 420 ರಂತೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಯೆಂದು ನಿಪಿ.2 ರ ಪಹಣಿ ಪತ್ರಿಕೆ, ನಿಪಿ.4 ರ ರೆಕಾರ್ಡ್ ಆಫ್ ರೈಟ್ಸ್ ನಿಪಿ.9 ರ ಇಂಡೆಕ್ಸ್ ಆಫ್ ಲ್ಯಾಂಡ್ ಹಾಗೂ ನಿಪಿ.10 ಹಕ್ಕಿನ ದಾಖಲೆ ರಿಜಿಸ್ಟರ್ ಗಳನ್ನು ಕೂಲಂಕುಷವಾಗಿ ಗಮನಿಸಿದಾಗ ಕಂಡು ಬರುತ್ತದೆ. ನಂತರ ಸದರಿ ಮಲ್ಲೇಗೌಡ ರವರು ಮರಣಾ ನಂತರ ಅವರ ಮಗಳಾದ ಕುಸುಮ ರವರಿಗೆ ದಿನಾಂಕಃ 17-01-2017 ರಂದು ಎಂ.ಆರ್.ನಂ.ಹೆಚ್.9/2016-17 ರಂತೆ ಪೌತಿ ಖಾತೆಯ ಆಧಾರದ ಮೇಲೆ ದಾವಾ ಆಸ್ತಿಯಾದ ಸರ್ವೆ ನಂ.15 ರ ವಿಸ್ತೀರ್ಣ 4 ಎಕರೆ 37 ಗುಂಟೆ ಜಮೀನು ಹಕ್ಕು ಬದಲಾವಣೆಯಾಗಿದ್ದು, ಅದಕ್ಕೆ ಪೂರಕವಾಗಿ ನಿಪಿ.6 ರಂತೆ ಮ್ಯುಟೇಶನ್ ರಿಜಿಸ್ಟರ್ ಹಾಗೂ ನಿಪಿ.3 ರಂತೆ ಪಹಣಿ ಪತ್ರಿಕೆಯನ್ನು ವಾದಿಯು ಹಾಜರುಪಡಿಸಿರುತ್ತಾರೆ. ಆದ್ದರಿಂದ ಮಲ್ಲೇಗೌಡ ರವರು ಪೌತಿಯಾದ ನಂತರ ವಾದಿಯ

ತಾಯಿಯಾದ ಕುಸುಮ ರವರಿಗೆ ದಾವಾ ಆಸ್ತಿಯು ಖಾತೆಯಾಗಿರುವುದಾಗಿ ಹೇಳಬಹುದಾಗಿದೆ. ಇನ್ನು ಸದರಿ ಕುಸುಮಾ ರವರು ಸಹ ಪೌತಿಯಾಗಿದ್ದು, ಅವರ ಮರಣಾ ನಂತರ ದಾವಾ ಆಸ್ತಿಯು ಅವರ ಮಗನಾದ ವಾದಿಗೆ ದಿನಾಂಕ 27-03-2017 ರಂದು ಎಂ.ಆರ್. ನಂ. ಹೆಚ್.17-2016-17 ರಂತೆ ಹಕ್ಕು ಬದಲಾವಣೆಯಾಗಿರುವುದು ನಿಪಿ.5 ನ್ನು ಗಮನಿಸಿದಾಗ ಕಂಡು ಬರುತ್ತದೆ ಹಾಗೂ ವಾದಿಯ ಹೆಸರಿಗೆ ದಾವಾ ಆಸ್ತಿಯು ನಮೂದಾಗಿರುವುದು 2019-2020 ರ ಪಹಣಿ ಪತ್ರಿಕೆಯನ್ನು ಸಹ ಗಮನಿಸಿದಾಗ ಕಂಡು ಬರುತ್ತದೆ. ಇದರಂತೆ ವಾದಿಯು ದಾವಾ ಆಸ್ತಿಯ ಸ್ವಾಧೀನಾನುಭವದರಾಗಿ ಕಾಲಕಾಲಕ್ಕೆ ಸರ್ಕಾರಕ್ಕೆ ಕಂದಾಯವನ್ನು ಪಾವತಿಸುತ್ತಿದ್ದು ಇದಕ್ಕೆ ಸಂಬಂಧಪಟ್ಟಂತೆ ವಾದಿಯು ನಿಪಿ.8 ರಂತೆ ಕಂದಾಯ ಪಾವತಿ ರಶೀತಿಯನ್ನು ಸಹ ಹಾಜರುಪಡಿಸಿರುತ್ತಾರೆ. ಆದ್ದರಿಂದ ವಾದಿಯು ಹಾಜರು ಪಡಿಸಿರುವ ದಾಖಲೆಗಳಿಂದ ದಾವಾ ಅನುಸೂಚಿ ಸ್ವತ್ತು ವಾದಿಯ ಹೆಸರಿನಲ್ಲಿರುವುದಾಗಿ ಹಾಗೂ ವಾದಿಯು ಸದರಿ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿರುವುದಾಗಿ ಹೇಳಲು ಯಾವುದೇ ಸಂಶಯವಿರುವುದಿಲ್ಲ.

12. ಪ್ರತಿವಾದಿಯರು ದಾವಾ ಸಲ್ಲಿಸುವ 15 ದಿನಗಳ ಮುಂಚೆ ವಾದಿಯು ದಾವಾ ಸ್ವತ್ತಿನಲ್ಲಿ ಜೆ.ಸಿ.ಬಿ ಸಹಾಯದಿಂದ ದಾವಾ ಸ್ವತ್ತಿನ ಸುತ್ತಲೂ ಚರಂಡಿಯನ್ನು ಅಚ್ಚುಕಟ್ಟು ಮಾಡುತ್ತಿರುವಾಗ ಪ್ರತಿವಾದಿಯರು ವಿನಾ ಕಾರಣ ಅಕ್ರಮ ಕೂಟ ಕಟ್ಟಿಕೊಂಡು ಬಂದು ವಾದಿಯೊಂದಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ದನಗಳನ್ನು ನುಗ್ಗಿಸಲು ಪ್ರಯತ್ನಿಸಿರುತ್ತಾರೆ ಎಂದು ಹಾಗೂ ಸದರಿ ವಿಚಾರವನ್ನು ವಾದಿಯು ಕೇಳಲಾಗಿ, ಪ್ರತಿವಾದಿಯರು ಪ್ರಾಣ ಬೆದರಿಕೆ ಹಾಕಿ ದೈಹಿಕವಾಗಿ ಹಲ್ಲೆ ನಡೆಸಲು ಪ್ರಯತ್ನಿಸಿರುತ್ತಾರೆ ಎಂದು ವಾದಿಯು ತನ್ನ ವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುತ್ತಾರೆ ಆದರೆ, ವಾದಿಯು ತನ್ನ ವಾದ ಪತ್ರದಲ್ಲಿ ಹೇಳಿರುವ ಅಂಶಗಳನ್ನು ಅಲ್ಲಗಳೆಯುವ ಸಲುವಾಗಿ ಪ್ರತಿವಾದಿಯರಿಗೆ ನ್ಯಾಯಾಲಯದಿಂದ

ಸಮನ್ಸ್ ಗಳನ್ನು ಕಳುಹಿಸಿದ್ದು, ಸದರಿ ಸಮನ್ಸ್ ಗಳು ಪ್ರತಿವಾದಿಯರಿಗೆ ಜಾರಿಯಾಗಿದ್ದರೂ ಸಹ ವಾದಿಯು ತಮ್ಮ ವಾದ ಪತ್ರದಲ್ಲಿ ತೆಗೆದುಕೊಂಡಿರುವ ನಿಲುವನ್ನು ಪ್ರತಿರೋಧಿಸುವ ಸಲುವಾಗಿ ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಅಲ್ಲದೇ ವಾದಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶವನ್ನು ಅಲ್ಲಗಳೆಯಲು ವಾದಿಯ ಪರ ಸಾಕ್ಷಿ-1 ರವರನ್ನು ಪಾಟೀ ಸವಾಲಿಗೂ ಸಹ ಒಳಪಡಿಸಿರುವುದಿಲ್ಲ ಹಾಗೂ ತಮ್ಮ ಪರವಾಗಿ ಯಾವುದೇ ಸಾಕ್ಷ್ಯವನ್ನು ವಿಚಾರಣೆ ಮಾಡುವುದಾಗಲೀ ಅಥವಾ ಯಾವುದೇ ದಾಖಲೆಗಳನ್ನು ತಮ್ಮ ಪರವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ನಿಶಾನೆಗೆ ಗುರುತಿಸಿಕೊಳ್ಳುವಲ್ಲಿ ಯಾವುದೇ ಪ್ರಯತ್ನ ಮಾಡಿರುವುದಿಲ್ಲ. ಇದರಿಂದ ಪ್ರತಿವಾದಿಯರ ವಿರುದ್ಧ ಏಕಪಕ್ಷೀಯ ಆದೇಶವಾಗಿರುತ್ತದೆ. ಆದ್ದರಿಂದ ದಾವಾ ಅನುಸೂಚಿ ಆಸ್ತಿಯಲ್ಲಿ ವಾದಿಯು ಸ್ವಾಧೀನದಲ್ಲಿರುವ ಬಗ್ಗೆ ನ್ಯಾಯಾಲಯವು ತನ್ನ ನಿಲುವನ್ನು ತೆಗೆದುಕೊಂಡಿರುತ್ತದೆ. ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ ವಾದಿಯು ನ್ಯಾಯಾಲಯದ ಮುಂದೆ ಸಲ್ಲಿಸಿರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯದ ಮೂಲಕ ತಾವು ದಾವಾ ಆಸ್ತಿಯಲ್ಲಿ ಸ್ವಾಧೀನದಾರರು ಎಂದು ರುಜುವಾತುಪಡಿಸಲು ಸಫಲರಾಗಿರುತ್ತಾರೆ ಹಾಗೂ ವಾದಿಯ ದಾವಾ ಆಸ್ತಿಯ ಸ್ವಾಧೀನಕ್ಕೆ ಪ್ರತಿವಾದಿಯರು ತಂಟೆತಕರಾರು ಮಾಡಲು ಪ್ರಯತ್ನಿಸುತ್ತಿರುವುದಾಗಿ ರುಜುವಾತುಪಡಿಸಲು ಸಫಲರಾಗಿರುತ್ತಾರೆ. ಆದ್ದರಿಂದ ವಾದಿಯು ಸದರಿ ದಾವಾದಲ್ಲಿ ಡಿಕ್ರಿ ಪಡೆಯಲು ಅರ್ಹರಾಗಿರುತ್ತಾರೆ. ಆದ ಕಾರಣ ನ್ಯಾಯಾಲಯವು ಅಂಶಃ1 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತದೆ.

ಎರಡನೆ ಅಂಶಃ

13. ಈ ಮೇಲ್ಕಂಡ ಅಂಶದಲ್ಲಿ ಚರ್ಚಿಸಿರುವ ಕಾರಣಗಳಿಂದ ಈ ಕೆಳಕಂಡಂತೆ ಅಂತಿಮ ಆದೇಶಃ

## ಆದೇಶ

ವಾದಿಯ ದಾವೆಯನ್ನು ಖರ್ಚು ಸಹಿತ ಪುರಸ್ಕರಿಸಿ ಡಿಕ್ರಿ ಮಾಡಲಾಗಿದೆ.

ಮುಂದುವರೆದು, ಪ್ರತಿವಾದಿಯಾಗಲೀ ಅಥವಾ ಅವರ ಕಡೆಯವರಾಗಲೀ ಅಥವಾ ಇತರೆ ಯಾರೇ ಆಗಲೀ ವಾದಿಯ ದಾವಾ ಅನುಸೂಚಿ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡದಂತೆ ಮತ್ತು ಕೃಷಿ ಚಟುವಟಿಕೆಗಳಿಗೆ ಯಾವುದೇ ರೀತಿಯ ತೊಂದರೆ, ತಕರಾರು ಅಡ್ಡಿ ಆತಂಕ ಪಡಿಸದಂತೆ ಪ್ರತಿವಾದಿಯರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಯನ್ನು ನೀಡಿ ಆದೇಶಿಸಲಾಗಿದೆ.

ಇದರಂತೆ ಡಿಕ್ರಿಯನ್ನು ಬರೆಯತಕ್ಕದ್ದು.

(ಮೇಲ್ಕಂಡ ತೀರ್ಪನ್ನು ಶೀಘ್ರಲಿಪಿಗಾರಳಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ಕೊಟ್ಟು ಬೆರಳಚ್ಚಿನ ನಂತರ ತಿದ್ದುಪಡಿಯನ್ನು ಮಾಡಿ, ದಿನಾಂಕಃ 10 ನೇ ಫೆಬ್ರವರಿ 2023 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.)

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಬೇಲೂರು.

## -ಅನುಬಂಧ-

### ವಾದಿಯ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ

**ಪಿಡಬ್ಲ್ಯೂ -1-** ವಿರೂಪಾಕ್ಷ ಕೆ.ಸಿ.

### ವಾದಿಯ ಪರವಾಗಿ ಗುರುತಿಸಲಾದ ನಿಶಾನೆಗಳ ಪಟ್ಟಿಃ

| | | |
|---|---|---|
| ನಿಪಿ-1 | - | ಸರ್ವೆ ನಂ.15 ರ 2019-2020 ನೇ ಸಾಲಿನ ಪಹಣಿ ಪತ್ರಿಕೆ |
| ನಿಪಿ-2 | - | ಸರ್ವೆ ನಂ.15 ರ 2016-2017 ನೇ ಸಾಲಿನ ಪಹಣಿ ಪತ್ರಿಕೆ |

| | | |
|---|---|---|
| ನಿಪಿ3 | - | ಸರ್ವೆ ನಂ.15 ರ 2016-17 ನೇ ಸಾಲಿನ ಪಹಣಿ ಪತ್ರಿಕೆ |
| ನಿಪಿ4 | - | ಸರ್ವೆ ನಂ.15 ರ 1996-97 ರಿಂದ 2000-01 ನೇ ಸಾಲಿನ ಪಹಣಿ ಪತ್ರಿಕೆ |
| ನಿಪಿ5 | - | ಎಂ.ಆರ್. ನಂ. ಹೆಚ್ 17/16-17 ರ ಮ್ಯುಟೇಶನ್ ಪ್ರತಿ |
| ನಿಪಿ6 | - | ಎಂ.ಆರ್.ನಂ.ಹೆಚ್ 9/16-17 ರ ಮ್ಯುಟೇಶನ್ ಪ್ರತಿ |
| ನಿಪಿ7 | - | ಲೆಡ್ಜರ್ ಖಾತೆ ಪ್ರಮಾಣ ಪತ್ರ |
| ನಿಪಿ8 | - | ಕಂದಾಯ ಪಾವತಿ ರಶೀದಿ |
| ನಿಪಿ.9 | - | ಇಂಡೆಕ್ಸ್ ಆಫ್ ಲ್ಯಾಂಡ್ ನ ದೃಢಿಕೃತ ನಕಲು |
| ನಿಪಿ10 | - | ರೆಕಾರ್ಡ್ ಆಫ್ ರೈಟ್ ನ ದೃಢೀಕೃತ ನಕಲು |

ಪ್ರತಿವಾದಿಯರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ

ಇಲ್ಲಾ

ಪ್ರತಿವಾದಿಯರ ಪರವಾಗಿ ಗುರುತಿಸಲಾದ ನಿಶಾನೆಗಳ ಪಟ್ಟಿಃ

ಇಲ್ಲಾ

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಬೇಲೂರು.

<u>ಪ್ರತ್ಯೇಕ ಪ್ರತಿಯ ತೀರ್ಪಿನ ಆದೇಶದ ಭಾಗವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ.</u>

<u>ಆದೇಶ</u>

ವಾದಿಯ ದಾವೆಯನ್ನು ಖರ್ಚು ಸಹಿತ ಪುರಸ್ಕರಿಸಿ ಡಿಕ್ರಿ ಮಾಡಲಾಗಿದೆ

ಮುಂದುವರೆದು, ಪ್ರತಿವಾದಿಯಾಗಲೀ ಅಥವಾ ಅವರ ಕಡೆಯವರಾಗಲೀ ಅಥವಾ ಇತರೆ ಯಾರೇ ಆಗಲೀ ವಾದಿಯ ದಾವಾ ಅನುಸೂಚಿ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡದಂತೆ ಮತ್ತು ಕೃಷಿ ಚಟುವಟಿಕೆಗಳಿಗೆ ಯಾವುದೇ ರೀತಿಯ ತೊಂದರೆ, ತಕರಾರು ಅಡ್ಡಿ ಆತಂಕ ಪಡಿಸದಂತೆ ಪ್ರತಿವಾದಿಯರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಯನ್ನು ನೀಡಿ ಆದೇಶಿಸಲಾಗಿದೆ.

ಇದರಂತೆ ಡಿಕ್ರಿಯನ್ನು ಬರೆಯತಕ್ಕದ್ದು.

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಬೇಲೂರು.